MVC No1208/2025.

PW-1

**(ಇಂದು ದಿಃ 27-02-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು)**

**ಪಾಟೀ ಸವಾಲುಃ- 2ನೇ ಎದುರುದಾರರ ಪರ ಶ್ರೀ. HSP ವಕೀಲರಿಂದಃ-**

ಅಪಘಾತ ದಿನಾಂಕ 21.01.2025 ರಂದು ಆಗಿದೆ. ನಾನು ಸಂಗಾರಡ್ಡಿ ಜಿಲ್ಲೆಯ ಬಿ.ಜಿ.ಕಾಂತ ರಸ್ತೆ ಸ್ವಚ್ಛ ಮಾಡುತ್ತಿರುವಾಗ. ಬೆಳಿಗ 09.00 ರ ಸಮಯದಲ್ಲಿ ಹಿಂದಿನಿಂದ ಬಂದ ಕ್ರೈನ್ ನನಗೆ ಡಿಕ್ಕಿಪಡಿಸಿ ಅಪಘಾತ ಆಗಿದೆ. ಕ್ರೈನ್ ನಂಬರ ನೆನಪಿಲ್ಲ, ಅಪಘಾತ ಆದ ಸ್ಥಳದಲ್ಲಿ ನನ್ನ ಹೆಂಡತಿ ಮತ್ತು ಮಾವ ಕೂಡ ಕೆಲಸ ಮಾಡುತ್ತಿದ್ದರು . ನನ್ನ ಬಲ ಗೈ ಬುಜಕ್ಕೆ ಗಾಯ ಆಗಿತ್ತು . ಅಪಘಾತ ದ ನಂತರ ನನ್ನನ್ನು ಇಸ್ನಾಪುರ ಕಾಕಕೇಯಾ ಆಸ್ಪತ್ರೆಗೆ ಕರೆದುಕೊಂಡು ಹೋದಾರು . ಅಲ್ಲಿಂದ ಶ್ರೀಕಾರ ಆಸ್ಪತ್ರೆ ಹೈದ್ರಾಬಾದ್ ಗೆ ಹೋದೇವು. ನಾನು ಅಲ್ಲಿ 3 ದಿನ ಒಳ ರೋಗಿಯಾಗಿದ್ದೆ. ಅಲ್ಲಿಂದ ಕಲಬುರಗಿಯ ಸನ್ ರೈಜ ಆಸ್ಪತ್ರೆಯಲ್ಲಿ 6-7 ದಿನ ಒಳ ರೋಗಿಯಾಗಿದ್ದೆ. ನಾನು ಸನ್ ರೈಜ್ ಆಸ್ಪತ್ರೆಯಲ್ಲಿ ಒಳ ರೋಗಿ ಆಗಿ ಳಿಚಿಕಿತ್ಸೆ ಪಡೆದಿಲ್ಲ ಎಂದರೆ ಸರಿಯಲ್ಲ, ಅಪಘಾತ ಆದಾಗ ನನಗೆ 40 ವರ್ಷ ವಯಸ್ಸು . ನನ್ನ ವಯಸ್ಸು ತೋರಿಸಲು ಆದಾರ ಕಾರ್ಡ ಹಾಜರುಪಡಿಸಿದ್ದೇನೆ. ನಾನು ಕೂಲಿ ಆಗಿ ಕೆಲಸ ಮಾಡುತ್ತಿದ್ದೆ. ಆಂದ್ರಪ್ರದೇಶ ಸತ್ಯಾ ಸರ್ ಬಳಿ ಕೆಲಸ ಮಾಡುತ್ತಿದ್ದೆ. ನನಗೆ ದಿನಕ್ಕೆ 500/- ರೂಪಾಯಿ ಸಂಬಳ ಕೋಡುತ್ತಿದ್ದರು . ನಾನು ಆಸ್ಪತ್ರೆಗೆ 10,00,000/- ಖರ್ಚು ಮಾಡಡಿದ್ದೇನೆ. ಆ ಬಗ್ಗೆ ದಾಖಲಾತಿ ಹಾಜರುಪಡಿಸಿದ್ದೇನೆ. ಸುಳ್ಳು ದಾಖಲಾತಿ ಸೃಷ್ಟಿ ಮಾಡಿ ಹಾಜರುಪಡಿಸಿದ್ದೇನ ಎಂದರೆ ಸರಿಯಲ್ಲ, ನಾನು ಸಂಪೂರ್ಣ ಗುಣ ಮುಖ ಆದ ನಂತರ ಡಿಸ್ ಚಾರ್ಜ ಆಗಿದ್ದು , ಈ ಗ ನಾನು ಮೊದಲಿನಂತೆ ಕೆಲಸ ಮಾಡ ಬಲ್ಲೇ ಎಂದರೆ ಸರಿಯಲ್ಲ, ನನಗೆ ಯಾವುದೇ ಅಂಗ ನ್ಯೂನತೆ ಉಂಟಾಗಿಲ್ಲ ಎಂದರೆ ಸರಿಯಲ್ಲ, ನನಗೆ ತಿಂಗಳಿಗೆ 40,000/- ಆದಾಯ ಇತ್ತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ, ನಾನು ಆಸ್ಪತ್ರೆಗೆ 10,00,000/- ಖರ್ಚು ಮಾಡಿದ್ದೇನ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ, ಮುಂದಿನ ಚಿಕಿತ್ಸೆಗೆ 2,50,000/- ಬೇಕು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ, ನಾನು ಯಾವುದೇ ಆದಾರ ಇಲ್ಲದೆ ಸುಳ್ಳು ಅರ್ಜಿ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ,

MVC No1208/2025.

PW-1

ಕ್ರೈನ್ ಚಾಲಕನಿಗೆ ಡಿಎಲ್ ಇತ್ತು . ನಾನು ಅದನ್ನು ಹಾಜರುಪಡಿಸಿದ್ದೇನೆ . ಕ್ರೈನ್ ಚಾಲಕ ನ ಹೆಸರು ಗೊತ್ತಿಲ್ಲ, ಕ್ರೈನ್ ಮಾಲೀಕಿನ ಹೆಸರು ನನಗೆ ಗೊತ್ತಿಲ್ಲ, ನಾನು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ,

ಮರು ವಿಚಾರಣೆ ಇಲ್ಲ,

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)

**ಓ.ಹೇ.ಕೇ. ಸರಿ ಇದೆ.**

**ಹಿರಿಯ ಸಿವಿಲ್ ನ್ಯಾಯಾಧೀಶರು,**

**ಸೇಡಂ.**